ಸಂಪುಟ 59 | ಸಂಚಿಕೆ 292 | ಪುಟ 12+4 epaper.samyukthakarnataka.com ಮಂಗಳೂರು | ಹುಬ್ಬಳ್ಳಿ | ಕಲಬುರಗಿ | ಬೆಂ

ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು

ಗುರುವಾರ 7 | ಡಿಸೆಂಬರ್ 2017 | ₹ 5-00

CENTRAL LIBRARY



ಸ್ಟಾಕ್‌ಹೋಮ್‌ನ ಸ್ವೀಡಿಷ್ ಅಕಾಡೆಮಿಯಲ್ಲಿ ಬುಧವಾರ ನಡೆದಿರುವ ಪತ್ರಿಕಾಗೋಷ್ಠಿಯಲ್ಲಿ ಬ್ರಿಟಿಷ್ ಕಾದಂಬರಿಕಾರ ಕಾಝೂವೋ ಇಶಿಗುರೋ ಮಾತನಾಡುತ್ತಿರುವುದು

ನವದೆಹಲಿಯಲ್ಲಿ ಶ್ರೀಲಂಕಾ ವಿರುದ್ಧ ಮೂರನೇ ಟೆಸ್ಟ್ ಡ್ರಾ ನಂತರ ಸರಣಿ ಗೆದ್ದ ಸಂಭ್ರಮದಲ್ಲಿ ಟೀಮ್ ಇಂಡಿಯಾ ನಾಯಕ ವಿರಾಟ್ ಕೊಹ್ಲಿ.






# ಸ್ಮಾರ್ಟ್‌ಫೋನ್ ಕಳವಾದರೂ ಇಲ್ಲುಂಟು ಸಿಗುವ ಸೂತ್ರಗಳು

ಸ್ಮಾರ್ಟ್‌ ಫೋನ್‌ಗಳು ನಮ್ಮ ಜೀವನದ ಅವಿಭಾಜಿತ ಅಂಗವಾಗಿಬಿಟ್ಟಿದೆ. ಸ್ವಲ್ಪ ಸಮಯದ ಮಟ್ಟಿಗೂ ದೂರವಾದರೆ ಅದೇನೋ ಕಳಕೊಂಡಂತೆ ಭಾಸವಾಗುತ್ತದೆ. ಸ್ಮಾರ್ಟ್‌ಫೋನ್ ಮೂಲಕ ತಮ್ಮ ವ್ಯಾಪಾರ, ವ್ಯವಹಾರ ಮಾಡುವ ಹಲವಾರು ಮಂದಿಯ ವಹಿವಾಟು ಸ್ಥಗಿತವಾಗಿ ಬಿಡುತ್ತದೆ.

ಇಂತಹಾ ಪರಿಸ್ಥಿತಿಯಲ್ಲಿ ನಿಮ್ಮ ಫೋನ್ ಕಳೆದು ಹೋದರೆ ಅಥವಾ ಕಳವಾದರೆ ನಿಮ ಪರಿಸ್ಥಿತಿ ಏನಾಗಬಹುದು ಊಹಿಸಿ ನೋಡಿ. ಇನ್ನು ಮುಂದೆ ನಿಮ್ಮ ಸ್ಮಾರ್ಟ್‌ಫೋನ್ ಕಳೆದುಹೋದರೆ ಪುನಃ ಹುಡುಕಿ ಪಡೆಯಬಹುದಾಗಿದೆ.

ಸಾಮಾನ್ಯವಾಗಿ ಸ್ಮಾರ್ಟ್‌ಫೋನ್ ಕಳವಾದರೆ ಆ ಫೋನನ್ನು ಯಾರೂ ಕೂಡಾ ಟ್ರ್ಯಾಕ್ ಮಾಡಬಾರದೆಂದು ಕಳ್ಳ ಮಾಡುವ ಮೊತ್ತ ಮೊದಲು ಅದರ ಸಿಮ್ ತೆಗೆದು ಬಿಡುತ್ತಾನೆ ಅಲ್ವಾ? ಆದರೆ ಈಗಿನ ಕಾಲದ ಸ್ಮಾರ್ಟ್ಫೋನ್‌ಗಳಲ್ಲಿ ವಿಶೇಷ ಸೌಲಭ್ಯಗಳಿವೆ.

ಇದನ್ನು ಪರಿಣಾಮಕಾರಿಯಾಗಿ ಬಳಸುವುದರಿಂದ ನಿಮ್ಮ ಫೋನ್ ನಿಮಗೆ ವಾಪಾಸು ಸಿಗಲಿದೆ.

## Android phone

ಹಾಗಾಗಿ ಈಗಲೇ ನಿಮ್ಮ ಸ್ಮಾರ್ಟ್ ಫೋನ್ ನಲ್ಲಿ ಗೂಗಲ್ ಪ್ಲೇ ಯಿಂದ

ಎಂಬ App ಡೌನ್ಲೋಡ್ ಮಾಡ್ಕೊಳ್ಳಿ. ನಂತರ ತಮ್ಮ ಗೂಗಲ್/ Gmail account ಮೂಲಕ Log in ಮಾಡಿರಿ. ನಂತರ ಅದರಲ್ಲಿ Protection Password ಹಾಗೂ ನಿಮ್ಮ ಕುಟುಂಬ ಸದಸ್ಯರ ಮೊಬೈಲ್ ನಂಬರ್ ಹಾಗೂ ಮೊಬೈಲ್ ಕಳೆದು ಹೋದಾಗ ಲಭಿಸಬೇಕಾದ ಮೆಸೆಜ್ ಸೆಟ್ ಮಾಡಿಕೊಳ್ಳಿ.

ನಂತರ ಕೂಡಲೇ ಇನ್ನೊಂದು ಮೊಬೈಲ್ ಅಥವಾ ಕಂಪ್ಯೂಟರ್ ಮೂಲಕ Google/find my device ಸರ್ಚ್ ಮಾಡಿ, ಅದರಲ್ಲಿ ನಿಮ್ಮ ಗೂಗಲ್ ಅಕೌಂಟ್ ನಿಂದ ಲಾಗಿನ್ ಆಗಿರಿ. ನಂತರ ಅದರಲ್ಲಿ ನಿಮ್ಮ ಕಳಕೊಂಡ ಮೊಬೈಲ್ ಹುಡುಕುವ, ಫೋನ್ ಕಳೆದು ಹೋದಾಗ ಅಲರ್ಟ್ ಮೆಸೇಜ್ ಸಿಗುವಂತೆ ಮಾಡಲು ಅಥವಾ ತಮ್ಮ ಗೌಪ್ಯನೀಯ ಮೆಸೇಜ್‌ಗಳನ್ನು ಡಿಲೀಟ್ ಮಾಡುವ ಆಪ್ಷನ್‌ಗಳು ಕಾಣುತ್ತವೆ. ಈ ಪೇಜ್ ಮೂಲಕ ನಿಮ್ಮ ಕಳೆದು ಹೋದ ಫೋನ್ ಹುಡುಕಬಹುದಾಗಿದೆ ಅಲ್ಲದೆ ಸಿಮ್ ತೆಗೆಯಲ್ಪಟ್ಟಿದ್ದರೂ ಕೂಡಾ ಈ ಪೇಜ್ ಮೂಲಕ ಕಳೆದು ಹೋಗಿರುವ ಫೋನ್ Automatic Lock ಮಾಡಬಹುದಾಗಿದೆ.

## iPhone

iPhone ಬಳಕೆದಾರರು iTune ನಿಂದ Find my iPhone ಡೌನ್ಲೋಡ್ ಮಾಡ್ಕೊಂಡು ಮೇಲೆ ತಿಳಿಸಿರುವ ವಿಧಾನ ಅನುಸರಿಸಿರಿ. iPhone ಬಳಕೆದಾರರಿಗೆ Android phone ಫೋನ್‌ಗೆ ಸಿಗುವ ಎಲ್ಲಾ ಸೌಲಭ್ಯ ಸಿಗುವುದರೊಂದಿಗೆ ಇನ್ನೊಂದು ಪ್ರಯೋಜನಕಾರಿ ಸೌಲಭ್ಯವೂ ಇದೆ. ಅದೇನೆಂದರೆ, ಒಂದು ವೇಳೆ ನಿಮ್ಮ ಫೋನ್ ನಿಮ್ಮ ಮನೆಯಲ್ಲೇ ಎಲ್ಲಾದರು ಕಾಣದಾದರೆ ಚಪ್ಪಾಳೆ ತಟ್ಟಿದರೆ ಸಾಕು. ನಿಮ್ಮ ಚಪ್ಪಾಳೆಯ ಸದ್ದು ಕೇಳಿ ನಿಮ್ಮ ಫೋನ್ ಯಾವುದೇ ಮೋಡ್‌ನಲ್ಲಿದ್ದರೂ ಕೂಡಾ ನಿಮಗೆ ಅಲರ್ಟ್ ಶಬ್ದ ಮಾಡಿ ತನ್ನ ಇರುವಿಕೆಯನ್ನು ನಿಮಗೆ ತಿಳಿಸುತ್ತದೆ.

ಇಷ್ಟು ಸುಲಭ ವಿಧಾನವನ್ನು ಮಾಡಿಕೊಂಡರೆ ನಿಮ್ಮ ಫೋನ್ ಸುರಕ್ಷಿತವಾಗುತ್ತದೆ. ಒಂದು ವೇಳೆ ಕಳೆದು ಹೋದರೂ ಕೂಡಾ ಸಿಮ್ ತೆಗೆಯಲ್ಪಟ್ಟಿದ್ದರೂ ಕೂಡಾ ನಿಮ್ಮ ಮೊಬೈಲ್ ಇರುವ ಜಾಗವನ್ನು ತೋರಿಸಿಕೊಡುತ್ತದೆ. ಇದರೊಂದಿಗೆ ನಿಮ್ಮ ಫೋನ್‌ನ IMEI number ಅನ್ನು ಬೇರೆ ಕಡೆಯಲ್ಲಿ ಸೇವ್ ಮಾಡಿಟ್ಟುಕೊಳ್ಳಿ. ಯಾವುದೂ ವರ್ಕ್ ಆಗದಾಗ ಅದು ಕೆಲಸಕ್ಕೆ ಬರುತ್ತದೆ.

ಆರೀಫ್ ವಾಲೀಕಾರ, 9900147571